**ದಿನಾಂಕಃ 18-10-2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲುಃ ಶ್ರೀ ಎಸ್.ಎನ್.ಎಂ. ವಕೀಲರಿಂದಃ**

ಮೂವತ್ತು, ಮೂವತ್ತೈದು ವರ್ಷಗಳ ಹಿಂದೆ ಅಚ್ಚಮ್ಮ ಮತ್ತು ವೆಂಕಟಮೂರ್ತಿ ನಡುವೆ ಇದ್ದ ದಾವೆಯಲ್ಲಿ ನಾನು ಪಕ್ಷಗಾರನಾಗಿದ್ದೆ. ನನಗೆ ನ್ಯಾಯಾಲಯದ ಕಲಾಪಗಳ ಬಗ್ಗೆ ತಿಳಿದಿರುತ್ತದೆ ಎಂದರೆ ಸರಿಯಲ್ಲ. ನಾನು ವಾದಿ ಮತ್ತು ಪ್ರತಿವಾದಿಗಳ ಕುಟುಂಬದವರ ಪರಿಚಯವಿರುತ್ತದೆ. ನಾನು ಹನುಮಂತರಾಯಪ್ಪ ಹಾಗೂ ಸಂಜೀವಮ್ಮ ಪ್ರತಿವಾದಿಗಳನ್ನು ನೋಡಿರುತ್ತೇನೆ. ದಾವಾ ಸ್ವತ್ತು ಮೂಲತಃ ಯಾರದ್ದು ಎಂದು ನಾನು ವಿಚಾರಿಸಿರುವುದಿಲ್ಲ. 1 ನೇ ಪ್ರತಿವಾದಿ ಎಲ್ಲರಿಗೂ ಭಾಗ ಇರುತ್ತದೆ ಎಂದು ಹೇಳಿರುತ್ತಾರೆ. ದಾವಾ ಸ್ವತ್ತು ವಾದಿ ಹಾಗೂ ಅವರ ಪತ್ನಿಗೆ ಹೇಗೆ ಬಂದಿರುತ್ತದೆ ಎಂದು ನಾನು ನೋಡಿರುವುದಿಲ್ಲ. ವಿಭಾಗವನ್ನು ಮಾಡಿಕೊಂಡ ಪತ್ರಕ್ಕೆ ನಾನು ಸಾಕ್ಷಿದಾರನಾಗಿ ಸಹಿ ಹಾಕಿರುತ್ತೇನೆ. ವಿಭಾಗ ಪತ್ರವನ್ನು ಲಕ್ಷ್ಮೀನಾರಾಯಣಪ್ಪ ರವರು ಬರೆದಿರುತ್ತಾರೆ. ಸದರಿ ಪತ್ರಕ್ಕೆ ನಾನು ತಿಪ್ಪೇರುದ್ದಪ್ಪ, ಗುಡಿಪಲ್ಲಿ ರಂಗಪ್ಪ ಮತ್ತು ಇನ್ನೊಬ್ಬರು ಸಹಿ ಹಾಕಿರುತ್ತಾರೆ ಅವರ ಹೆಸರು ನನಗೆ ನೆನಪಿಲ್ಲ. ಸದರಿ ಮೂಲ ದಾಖಲೆಯನ್ನು ಬಿಳಿ ಹಾಳೆಯ ಮೇಲೆ ಬರೆದಿರಬಹುದು ನನಗೆ ಸರಿಯಾಗಿ ನೆನಪಿರುವುದಿಲ್ಲ. ವಿಭಾಗ ಪತ್ರವನ್ನು ಹನುಮಂತರಾಯಪ್ಪ ರವರ ಕೈಯಿಗೆ ಕೊಟ್ಟಿರುತ್ತಾರೆ. ದಾವೆಯನ್ನು ಕೋನಪ್ಪ ರವರು ಹನುಮಂತರಾಯಪ್ಪ ರವರ ವಿರುದ್ಧ ಸಲ್ಲಿಸಿರುತ್ತಾರೆ. ವಿತಕ್ಕಾಗಿ ಈ ಪ್ರಕರಣವನ್ನು ಸಲ್ಲಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಈ ದಾವೆಯಲ್ಲಿ ಸೇರಿಸುವ ಸ್ವತ್ತುಗಳ ಸಂಖ್ಯೆ ನನಗೆ ಗೊತ್ತಿರುವುದಿಲ್ಲ. ಆದರೆ ಸರ್ವೇ ನಂ. 1 ರಲ್ಲಿ ಮನೆ ಇರುತ್ತದೆ ಹಾಗೂ ಉಳಿದ ಸರ್ವೇ ನಂಬರ್ ಗಳಲ್ಲಿ ಕೋನಪ್ಪ ಮತ್ತು 1 ನೇ ವಾದಿ ಸಮಾನವಾಗಿ ಹಂಚಿಕೊಳ್ಳಬೇಕು ಎಂದು ಮಾತನಾಡಿಕೊಳ್ಳುತ್ತಾರೆ. ಕೋನಪ್ಪ ರವರ ತಂದೆ ಹಾಗೂ ಅವರ ಹೆಂಡತಿ ಸಂಜೀವಮ್ಮ ರವರನ್ನು

ನೋಡಿರುತ್ತೇನೆ ಎಂದರೆ ಸರಿಯಲ್ಲ. ಅವರ ತಂದೆಯನ್ನು ಮಾತ್ರ ನೋಡಿರುತ್ತೇನೆ ಅವರ ತಾಯಿಯನ್ನು ನೋಡಿರುವುದಿಲ್ಲ. 1 ನೇ ಪ್ರತಿವಾದಿ ಯಾವುದೇ ಹಕ್ಕು ಬಿಡುಗಡೆ ಪತ್ರವನ್ನು ಬರೆದಿರುವುದನ್ನು ನಾನು ನೋಡಿರುವುದಿಲ್ಲ. ನನಗೆ ಸ್ವಯಾರ್ಜಿತ ಮತ್ತು ಪಿತ್ರಾರ್ಜಿತ ಆಸ್ತಿಗಳ ಬಗ್ಗೆ ಮಾಹಿತಿ ಇರುತ್ತದೆ. ತಂದೆ ಅಥವಾ ತಾತನಿಂದ ಬಂದಿರುವ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳಾಗಿರುತ್ತವೆ. ತಂದೆಗೆ ದಾನಪತ್ರ, ಕ್ರಯ, ವಿಲ್ ಗಳಿಂದ ಬಂದಿರುವ ಆಸ್ತಿ ಸ್ವಯಾರ್ಜಿತ ಆಸ್ತಿಗಳಾಗಿರುತ್ತವೆ ಎಂದರೆ ಗೊತ್ತಿಲ್ಲ. ಹನುಮಂತಪ್ಪನಿಗೆ ದಾನ ಪತ್ರದ ಮೂಲಕ ದಾವಾ ಸ್ವತ್ತುಗಳಲ್ಲಿ ಕೆಲವು ಸ್ವತ್ತುಗಳು ಬಂದಿರುತ್ತವೆ ಎಂದರೆ ಗೊತ್ತಿಲ್ಲ. ಹನುಮಂತಪ್ಪನ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳಾಗಿರುತ್ತವೆ. ಸಂಜೀವಮ್ಮನಿಗೆ ಬಂದಿರುವಂತಹ ಆಸ್ತಿಗಳು ಅವರ ಸ್ವಯಾರ್ಜಿತ ಆಸ್ತಿಗಳಾಗಿರುತ್ತವೆ ಎಂರದೆ ಸರಿಯಲ್ಲ ಅವು ಒಟ್ಟು ಕುಟುಂಬದ ಆಸ್ತಿಗಳಾಗಿರುತ್ತವೆ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತೆ ಯಾವುದೇ ಪಂಚಾಯಿತಿ ಮಾಡಿರುವುದಿಲ್ಲ ಮತ್ತು ವಿಭಾಗ ಪತ್ರ ಬರೆದಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು 1 ಮತ್ತು 2 ನೇ ಪ್ರತಿವಾದಿಗಳ ಸ್ವಯಾರ್ಜಿತ ಆಸ್ತಿಗಳಾಗಿದ್ದು ಅವುಗಳನ್ನು ವಿಭಾಗ ಮಾಡಲು ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ. ಪ್ರಭಾಕರ್ ರೆಡ್ಡಿ ಹಾಗೂ ನಾನು ಇಬ್ಬರೂ ಜೆ.ಡಿ.ಎಸ್. ಪಕ್ಷದವರಾದ ಕಾರಣ ಅವರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ**

**ಎ.ಸಿ.ಜೆ., ಪಾವಗಡ.**